ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENC   RANCH**

ಪತ್ರಿಕಾ ತುಣುಕುಗಳು

**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ    ದಿನಾಂಕ : DATE 19/4/21

# ತೊಡಕು ನಿವಾರಣೆಗೆ ಮೋದಿ ಸಭೆ

## ರಾಜ್ಯದ ಅಧಿಕಾರಿಗಳ ತಯಾರಿ | ತುರ್ತಾಗಿ ಮಾಹಿತಿ ಸಂಗ್ರಹ

ವಿಜಯವಾಣಿ ಸುದ್ದಿಜಾಲ ಬೆಂಗಳೂರು 19/4/21

ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಜಾರಿ, ಕಾರ್ಯಕ್ರಮಗಳ ಅನುಷ್ಠಾನ, ಕುಂದುಕೊರತೆ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಶೀಘ್ರವೇ ಸಭೆ ನಡೆಸಲಿದ್ದು, ಅಧಿಕಾರಿಗಳು ಆತುರಾತುರವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಪ್ರಮುಖವಾಗಿ ಈಸ್ ಆಫ್ ಡೂಯಿಂಗ್‌ಗೆ ಸಂಬಂಧಿಸಿದಂತೆ ಚರ್ಚೆ, ಕೈಗಾರಿಕೆ ಮತ್ತು ಉದ್ಯಮಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಮೋದಿ ವಿಚಾರ ವಿನಿಮಯ ನಡೆಸುವರು. ಪ್ರಧಾನಿ ವಿಡಿಯೋ ಸಂವಾದ ನಡೆಸಲಿದ್ದಾರೆಂಬ ಸಂದೇಶ ಬರುತ್ತಿದ್ದಂತೆ ಸರ್ಕಾರಕ್ಕೆ ಬಿಸಿ ಮುಟ್ಟಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅನಧಿಕೃತ ಟಿಪ್ಪಣಿ ಹೊರಡಿಸಿ ಮಾಹಿತಿಯನ್ನು ಒಟ್ಟು ಮಾಡಲು ಮುಂದಾಗಿದೆ.



ದೇಶದಲ್ಲಿ ಹೂಡಿಕೆ ಹೆಚ್ಚಾಗಬೇಕಾದರೆ ಈಸ್ ಡೂಯಿಂಗ್ ಬಿಜಿನೆಸ್‌ಗೆ ಮಹತ್ವ ನೀಡಬೇಕು, ಯಾವ ಯಾವ ಕ್ಷೇತ್ರದಲ್ಲಿ ಅಡೆತಡೆ ನಿವಾರಿಸಬೇಕೆಂದು ಕೇಂದ್ರ ಸರ್ಕಾರ ಈ ಹಿಂದೆಯೇ ಎಲ್ಲ ರಾಜ್ಯಗಳಿಗೂ ತಿಳಿಸಿತ್ತು. ಈ ಕೆಲಸ ಆಗಿದೆಯೇ ಎಂಬ ಪರಾಮರ್ಶೆಯನ್ನು ಪ್ರಧಾನಿಯವರೇ ಗಮನಿಸುವರು ಎಂದು ಮೂಲಗಳು ತಿಳಿಸಿವೆ.

ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ಕಾನೂನು-ನಿಯಮಗಳ ಸರಳೀಕರಣ, ಕ್ರಮಗಳನ್ನು ಸುಧಾರಿಸುವುದು, ಡಿಜಿಟಲೀಕರಣ ಸೇರಿ ಹಲವು ನಿರ್ಣಯಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸ್ಪಷ್ಟ ಸೂಚನೆಗಳನ್ನು ನೀಡಿತ್ತು.

ಹಿಂದೆ ಯಾವುದೋ ಸಂದರ್ಭದಲ್ಲಿ ಕಾಯ್ದೆ, ಕಾನೂನಿನಲ್ಲಿ ಕಠಿಣ ಕ್ರಮಗಳ ಉಲ್ಲೇಖವಾಗಿದೆ. ನಿಯಮ ಉಲ್ಲಂಘನೆಗಳಾದಾಗ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾಪಗಳಿವೆ. ಅವುಗಳನ್ನು ಕೈಬಿಟ್ಟು ಗಂಭೀರವಲ್ಲದ ಪ್ರಕರಣ ಎಂದು ಪರಿಗಣಿಸಿ ದಂಡ ವಿಧಿಸಲು ಅವಕಾಶ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಮಾಡಿಕೊಳ್ಳಬೇಕೆಂದು ತಿಳಿಸಲಾಗಿತ್ತು. ಈ ಪ್ರಯತ್ನದ ಭಾಗವಾಗಿ ರಾಜ್ಯದಲ್ಲಿ ಕಾರ್ಮಿಕ ಕಾನೂನು ತಿದ್ದುಪಡಿಗೆ ಪ್ರಯತ್ನಿಸಿದಾಗ ವಿರೋಧವೂ ವ್ಯಕ್ತವಾಗಿತ್ತು. ಸುಗ್ರೀವಾಜ್ಞೆ ತಂದರೂ ಕಾಯ್ದೆ ರೂಪಿಸಲು ಸಾಧ್ಯವಾಗಿರಲಿಲ್ಲ. ಭೂ ಸುಧಾರಣೆ ತಿದ್ದುಪಡಿಯಂತೆ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಕೆಲವು ಪ್ರಮುಖ ನಿರ್ಧಾರ ಮಾಡಿದೆ. ಇಷ್ಟರ ನಡುವೆಯೂ ಕೇಂದ್ರ ಪ್ರಸ್ತಾಪಿಸಿದ ಎಲ್ಲ ಅಂಶಗಳ ಬಗ್ಗೆ ಗಮನ ಹರಿಸಲು ಹಾಗೂ ಸ್ಥಳೀಯ ವಿರೋಧ, ಆಂತರಿಕ ಆಕ್ಷೇಪಣೆಗಳಿಂದ ಸಾಧ್ಯವಾಗಿಲ್ಲ. ಕೆಲವು ಉದಾಸೀನದಿಂದ ತೀರ್ಮಾನ ಮಾಡದೇ ಹಾಗೆ ಬಾಕಿ ಇಟ್ಟುಕೊಳ್ಳಲಾಗಿದೆ. ಇದೆಲ್ಲ ಸಂಗತಿ ಸಭೆಯಲ್ಲಿ ಚರ್ಚೆಯಾಗುವುದು.

ಮುಂದೆ ಹೊಸ ಗಡುವು ನೀಡಿದ್ದು, ಕೇಂದ್ರ ಮತ್ತು ರಾಜ್ಯಗಳಲ್ಲಿ ಒಟ್ಟು ಎಷ್ಟು ಕಾನೂನು, ನೀತಿ ನಿಯಮಗಳು ಪರಿಷ್ಕರಣೆಯಾಗಬೇಕೆಂದು ಕೇಂದ್ರ ಮಾಹಿತಿ ಪ್ರಕಟಿಸಿದೆ.